# ಪ್ರಾರ್ಥನೆ

## ಶ್ರೀರಾಮಕೃಷ್ಣೋದಯ

ಶ್ರೀಮಾತೃದೇವತೆಯ ಭ್ರಾತೃಭಾವ ಪ್ರಾತಃಸಂಧ್ಯೆ ಉದಿಸಿ
ದಾಯಾದಿತನದ ಆ ಕಾಳಕತ್ತಲೆಗೆ ಅಸ್ತವನ್ನು ವಿಧಿಸಿ
ಜನದ ಧಂಧಣದ ಮನದ ಗೊಂದಣವು ನೃತ್ಯವಾಗಲೆಂದು
ಹೃದಯದುನ್ನನಿಯೆ ಹರಸು ತಾಯಿ, ಕೃತಕೃತ್ಯವಾಗಲೆಂದು.

ಪೂರ್ವಪಶ್ಚಿಮವು ಕೈಯ ಕುಲುಕಿ ಕೊಡುಕೊಳೆಯ ನಡೆಸುವಂತೆ
ದಾಕ್ಷಿಣಾತ್ಯರಿಗು ಉತ್ತರೋತ್ತರದ ಹಾದಿ ಹಿಡಿಸುವಂತೆ
ವರ್ಣವರ್ಣ ಸಂಘರ್ಷವಡಗಿ ಹೊಸ ಬೆಳಕು ಮೂಡುವಂತೆ
ಮಾಡು ಭಾರತಿಯೆ, ವಸುಂಧರೆಗೆ ನವಯೋಗ ಕೂಡುವಂತೆ.

ರವಿಗೆ ಎತ್ತಿದಾರತಿಯ ಕೈಯೆ ಕೈದಾಗೆ ಕಲಿಯ ಸುಳಿಗೆ
ನರನು ಹೊತ್ತಿಸಿದ ಜ್ಞಾನದೀಪಿಕೆಗೆ ಕತ್ತಲಿತ್ತು ಕೆಳಗೆ.
ಭುವಿಗೆ ಮಂಗಳವು ನಿನ್ನ ಕೃಪೆಯ ತೋರಣವು ಕಟ್ಟಿದಾಗ್ಗೆ
ಚಂದ್ರಮಂಡಲದಿ ಮಂಗಳಾಂಗಣದಿ ಬೇರೆ ಜ್ಯೋತಿ ಬೆಳಗೆ.

ಹಾರ್ದಪ್ರಾರ್ಥನೆಯ ಪಂಚಕಂಚುಕವ ಕವಚವಾಗಿ ತೊಟ್ಟು
ನಿನ್ನ ಮನನವನೆ ತನನ ನುಡಿಸುವೆನು ಶಿರವ ಪದದೊಳಿಟ್ಟು
ರಾಷ್ಟ್ರಿ ಅಂಭೃಣಿಯೆ, ನಿನ್ನ ಬಿಲ್ಲ ಜೇಂಗುಡಿಸು ಗುರಿಯನಿಟ್ಟು
ಎಲ್ಲ ಮಾತಿಗೂ ನೀನೆ ಮಾತೆ, ಯಾರಿಹರು ನಿನ್ನ ಬಿಟ್ಟು?

ಗುರುಗಂಗೆಯಲ್ಲಿ ನೆರೆದಿತ್ತು ಶಿಷ್ಯಮಂಡಲದಖಂಡ ಜಮುನೆ
ಗುಪ್ತಶಾರದೆಯ ಸುಪ್ತವಾಹಿನಿಯು ಕರುಣೆ ಮಂದಗಮನೆ;
ತ್ಯಾಗಭೋಗದಾ ಪೂರ್ಣಯೋಗವಾಗಿರಲಿ ಈ ತ್ರಿವೇಣಿ
ಕಟ್ಟುತಿರಲಿ ಸೋಪಾನಮಾರ್ಗ ಆ ದಿವ್ಯ ಜನ್ಮ ಶ್ರೇಣಿ.

— ಅಂಬಿಕಾತನಯದತ್ತ

### ಸೂಕ್ತಿಪ್ರಭ

## ಸಂಸ್ಕೃತಿ-ಸೂಕ್ತಿ

**ಸಂ**ಸ್ಕೃತಿಯು ಸಂಪೂರ್ಣದಶೆಗೆ ಬಂದಾಗ ಮನುಷ್ಯನು ವಿಶ್ವವಿಶಾಲ ಜೀವಿಯಾಗುತ್ತಾನೆ. ಆಗ ಕಾಲ, ದೇಶ, ಪರಿಮಿತಿಗಳು ಅವನನ್ನು ಹಿಡಯವು.

— ಡಿ.ವಿ.ಜಿ.

**ಸಂ**ಸ್ಕೃತಿಯು ತಾನು ಪ್ರಕಟಿಸಿ ತೋರಿಸುವುದಕ್ಕಿಂತ ಅಡಗಿಸಿಕೊಳ್ಳುವುದೇ ಅಧಿಕ. ಆಶ್ಚರ್ಯಕರವಾದ ಸಂಗತಿಯೆಂದರೆ ಅದು ಒಳಗೊಳ್ಳುವ ವ್ಯಕ್ತಿಗಳಿಂದ ತನ್ನನ್ನು ಅತ್ಯುತ್ತಮವಾಗಿ ಅಡಗಿಸಿಕೊಳ್ಳುವುದು.

— ಎಡ್ವರ್ಡ್ ಟಿ. ಹಾಲ್

**ಮ**ನುಷ್ಯನಲ್ಲಿ ಆಗಲೇ ಸುಪ್ತವಾಗಿರುವ ಪಾವಿತ್ರ್ಯವನ್ನು ಯಾವುದು ವ್ಯಕ್ತಗೊಳಿಸುವುದೋ ಅದೇ ಸಂಸ್ಕೃತಿ.

— ಸ್ವಾಮಿ ವಿವೇಕಾನಂದ

**ಮ**ನುಕುಲದ ತೊಟ್ಟಿಲಾಗಿರುವ, ಮಾನವನ ಭಾಷೆಯ ತವರೂರಾಗಿರುವ, ಇತಿಹಾಸದ ಮಾತೆಯಾಗಿರುವ, ದಂತಕತೆಗಳ ಅಜ್ಜಿಯಾಗಿರುವ ಹಾಗೂ ಪರಂಪರೆಯ ಮುತ್ತಜ್ಜಿಯಾಗಿರುವ ದೇಶವೇ ಭಾರತ. ಮಾನವನ ಇತಿಹಾಸದ ಅನರ್ಘ್ಯ ಬೋಧಪ್ರದ ರತ್ನಗಳು ಭಾರತದಲ್ಲಿ ಮಾತ್ರವೇ ಅಡಗಿದೆ.

— ಮಾರ್ಕ್ ಟ್ವೇನ್